**ಅಸಲು ದಾವಾ ಸಂಖ್ಯೆ: 1313/2022**
**ಪಿಡಬ್ಲೂ-1**

**ದಿಃ 11-03-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. BNP ರವರಿಂದಃ-**

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ನನ್ನ ಅಜ್ಜ ತಾತಪ್ಪ ಶೇರಿ ರವರು ನನ್ನ ತಂದೆ ಅಜಿತ ಶೇರಿ ಹಾಗೂ ನನ್ನ ದೊಡ್ಡಪ್ಪ ಅಪ್ಪಾಸಾಹೇಬ ಶೇರಿ ರವರ ಹೆಸರಿಗೆ ಬರೆದುಕೊಟ್ಟ ಮೃತ್ಯು ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಸದರಿ ಅಸಲು ಮೃತ್ಯು ಪತ್ರ ಮಾನ್ಯ 3ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಲಯ, ಬೆಳಗಾವಿ ಇಲ್ಲಿ ಅಸಲು ದಾವಾ ಸಂಖ್ಯೆ 27/2010 ರಲ್ಲಿ ಹಾಜರುಪಡಿಸಿದ್ದು, ನಾನು ಈ ದಿನ ಅದರ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು,

ಸದರಿ ಮೃತ್ಯು ಪತ್ರ ಮರಾಠಿ ಭಾಷೆಯಲ್ಲಿ ಇದ್ದು, ಅದರ ಆಂಗ್ಲ ಭಾಷೆಯ ತರ್ಜುಮೆ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1(ಎ) ಎಂದು,

ಮೃತ್ಯು ಪತ್ರದ ಪ್ರಕಾರ ಸಿಟಿ ಸರ್ವೆ ಇಲಾಖೆಯವರು ಆಸ್ತಿಯಲ್ಲಿ ವಿಭಾಗ ಮಾಡಿ ಸಿಟಿ ಸರ್ವೆ ನಂಬರ ಕೊಡುವ ಸಮಯದಲ್ಲಿ ದಾಖಲು ಮಾಡಿದ ಜವಾಬಿನ ದೃಡೀಕೃತ ನಕಲು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು,

ಸಿಟಿಎಸ್ ನಂಬರ 4905/24/A1, 4905/24/A3, 4905/24/A2 ರ ಪ್ರಾಪರ್ಟಿ ರಜಿಸ್ಟರ ಕಾರ್ಡಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-3 ರಿಂದ 5 ಎಂದು,

ಸಿಟಿ ಸರ್ವೆ ಇಲಾಖೆಗೆ ನನ್ನ ತಂದೆ ಹಾಗು ಅಪ್ಪಾಸಾಹೇಬ ಎಂದರೆ ಪ್ರತಿವಾದಿ ನೀಡಿದ ಅರ್ಜಿಯ ದೃಡೀಕೃತ ನಕಲು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು,

ಸಿಟಿಎಸ್ ನಂಬರ 4905/24/A1, 4905/24/A ಹಾಗು 4905/24/A/2 ರ ರೂಲ್ಡ ಕಾರ್ಡ ಮತ್ತು ಪ್ಲೇನ್ ಕಾರ್ಡನ ದೃಡೀಕೃತ ನಕಲುಗಳನ್ನು ಹಾಗೂ ಅವುಗಳಿಗೆ ಲಗತ್ತಿಸಿದ ನಕಾಶೆಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-7 ರಿಂದ 12 ಎಂದು,

ದಾವಾ ಸ್ವತ್ತಿನ ಎದುರು ಇರುವ ರಸ್ತೆ ಹಾಗೂ ರೈಲು ಹಾಳಿಗಳ ಛಾಯಾ ಚಿತ್ರಗಳನ್ನು, ಅದಕ್ಕೆ ಸಂಬಂಧಿಸಿದ pendrive ಹಾಗೂ ರಶೀದಿ ಹಾಗು ಅದರ ಜೊತೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65B ರ ಅಡಿಯಲ್ಲಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-13 ರಿಂದ 20 ಎಂದು, ಗುರುತಿಸಲಾಯಿತು.

**ಪ್ರತಿವಾದಿಯರು ಮತ್ತು ಅವರ ಪರ ವಕೀಲರು ಗೈರು ಹಾಜರಿಯಾಗಿದ್ದು ಸಾಕ್ಷಿಯ ಪಾಟೀ ಸವಾಲಿಗೆ ಮುಂದಿನ ದಿನಾಂಕವನ್ನು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**